**ಸಾಕ್ಷಿಯನ್ನು ದಿಃ 05.06.2024 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ಶ್ರೀ.ಎನ್.ಎಸ್ ವಕೀಲರಿಂದಃ

ಈಗ ತೋರಿಸಿದ ದಾಖಲಾತಿ ದಾವಾ ಐಟಂ ನಂ. 1 ರಿಂದ 4 ರ ಸ್ವತ್ತುಗಳು ಮಂಜೂರಾಗಿರುವ ಕುರಿತು ಆದೇಶದ ಪ್ರತಿ ಎಂದರೆ ಸರಿ. ಸದರಿ ಆದೇಶದ ಪ್ರತಿಯನ್ನು ನಿಡಿ 2 ಎಂದು ಗುರುತಿಸಲಾಯಿತು. ದಾವಾ ಐಟಂ ನಂ. 1 ರ ಸ್ವತ್ತು ಮಂಜೂರಾತಿದಾರರ ಅನುಭವದಲ್ಲಿರುತ್ತದೆ ಎಂದರೆ ಸರಿ. ದಾವಾ ಐಟಂ ನಂ.2 ರಸ್ವತ್ತಿನಲ್ಲಿ ನಾವೆಲ್ಲರೂ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿ. ಅದರಲ್ಲಿ 7 ಗುಂಟೆ ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 3 ರ ಸ್ವತ್ತು ಮಂಜೂರಾತಿ ಪ್ರಕಾರ ಮಂಜೂರಾತಿದಾರರ ಅನುಭವದಲ್ಲಿರುತ್ತದೆ ಎಂದರೆ ಸರಿ. ದಾವಾ ಐಟಂ ನಂ. 4 ರ ಸ್ವತ್ತಿನಲ್ಲಿ ಪ್ರತಿವಾದಿಗಳ ಜೊತೆ ನಾವು ಸ್ವಾಧೀನ ಹೊಂದಿರುತ್ತೇವೆ.

ದಾವಾ ಐಟಂ ನಂ. 5 ರ ಸ್ವತ್ತಿನಲ್ಲಿ 18 ಮನೆಗಳು ಇದ್ದು ಅದರಲ್ಲಿ ನಮ್ಮ ಕುಟುಂಬದ ಎಲ್ಲಾ ಸದಸ್ಯರು ವಾಸ ಇರುತ್ತಾರೆ ಎಂದರೆ ಸರಿ. ಈಗ ತೋರಿಸಿದ 8 ಫೋಟೋಗಳಲ್ಲಿರುವ ಮನೆಗಳು ದಾವಾ ಐಟಂ ನಂ. 5 ರ ಸ್ವತ್ತಿನಲ್ಲಿ ಕಟ್ಟಿರುವ ಮನೆಗಳಾಗಿರುತ್ತದೆ. ಸದರಿ 8 ಫೋಟೋಗಳನ್ನು ಒಟ್ಟಾಗಿ ನಿಡಿ 3 ಎಂದು ಗುರುತಿಸಲಾಯಿತು. ಈ ರೀತಿ ಮನೆಗಳನ್ನು ನಿರ್ಮಾಣ ಮಾಡಿರುವ ಕುರಿತು ನನ್ನ ವಾದಪತ್ರದಲ್ಲಿ ನಮೂದು ಮಾಡಿರುತ್ತೇನೆ ಎಂದರೆ ಸರಿ ಸದರಿ ಮನೆಗಳಿಗೆ ಪಂಚಾಯತಿ ಖಾತೆ ಇರುತ್ತದೆ ಎಂದರೆ ಸರಿ. ಸದರಿ ಮನೆಗಳು 25 ವರ್ಷಗಳಿಂದ ಅಸ್ತಿತ್ವದಲ್ಲಿರುತ್ತದೆ.

ದಾವಾ ಐಟಂ ನಂ.7 ರ ಸ್ವತ್ತನ್ನು ಚಿಕ್ಕಪಿಳ್ಳಪ್ಪ ರವರು ದಿನಾಂಕ 31-03-1954 ರ ನೋಂದಾಯಿತ ಕ್ರಯಪತ್ರದ ಪ್ರಕಾರ ಖರೀಧಿಸಿರುತ್ತಾರೆ ಎಂದರೆ ಸರಿ , ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಪರವಾಗಿ ಖರೀಧಿಸಲಾಗಿದೆ ಎಂದು ಉತ್ತರಿಸುತ್ತಾರೆ. ಸದರಿ ಸ್ವತ್ತು ಚಿಕ್ಕಪಿಳ್ಳಪ್ಪ ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸದರಿ ಚಿಕ್ಕಪಿಳ್ಳಪ್ಪ ರವರ ಮಕ್ಕಳಾದ ಪ್ರತಿವಾದಿ 23 ಮತ್ತು 24 ರವರು ಸದರಿ ಸ್ವತ್ತನ್ನು ನಿವೇಶನಗಳಾಗಿ ಪರಿವರ್ತನೆ ಮಾಡಿರುತ್ತಾರೆ ಎಂದರೆ ಸರಿ. ಅದರಲ್ಲಿ ಸ್ವಲ್ಪ ನಿವೇಶನಗಳನ್ನು ಮಾರಾಟ ಮಾಡಿದ್ದು , ಉಳಿದ ನಿವೇಶಗಳು ಬಾಕಿ ಇರುತ್ತವೆ. ಈ ಬಗ್ಗೆ ತಕರಾರು ಇರುತ್ತದೆ. ಸದರಿ ಸ್ವತ್ತಿನಲ್ಲಿ 37 ನಿವೇಶಗಳನ್ನು ಮಾಡಿದ್ದು, ಅದರಲ್ಲಿ 35 ನಿವೇಶಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿವೇಶನಗಳ ಖರೀಧಿದಾರರನ್ನು ಈ ಪ್ರಕರಣದಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಈ ರೀತಿ ನಿವೇಶನಗಳನ್ನು ಮಾಡಿರುವ ಬಗ್ಗೆ ಮತ್ತು ಕೆಲವು ನಿವೇಶಗಳನ್ನು ಮಾರಾಟ ಮಾಡಿರುವ ಬಗ್ಗೆ ನನ್ನ ವಾದಪತ್ರದಲ್ಲಿ ತಿಳಿಸಿರುತ್ತೇನೆ. ನಾನು ವಾದಪತ್ರದಲ್ಲಿ ತಿಳಿಸಿರುವಂತೆ ದಾವಾ ಐಟಂ ನಂ7 ರ ಸ್ವತ್ತು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.8 ರ ಸ್ವತ್ತನ್ನು ದೊಡ್ಡಮುನಿಸ್ವಾಮಿ ರವರ ಮಕ್ಕಳು ದಿನಾಂಕ 23-11-1970 ರ ವಿಭಾಗಪತ್ರದಂತೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವಿಭಾಗ ಮಾಡಿಕೊಂಡಿರುವುದು ತಪ್ಪು ಎಂದು ಉತ್ತರಿಸುತ್ತಾರೆ. ಈ ವಿಚಾರವನ್ನು ನನ್ನ ವಾದಪತ್ರದಲ್ಲಿ ತಿಳಿಸಿರುತ್ತೇನೆ. ದಾವಾ ಐಟಂ ನಂ. 8 ರಲ್ಲಿ ಮುನಿವೆಂಕಟಪ್ಪ ರವರಿಗೆ 2 ಎಕರೆ 20 ಗುಂಟೆ , ಸೀನಪ್ಪ ರವರಿಗೆ 10 ಗುಂಟೆ, ಚಿಕ್ಕಪಿಳ್ಳಪ್ಪ ರವರಿಗೆ 30 ಗುಂಟೆ , ತಿಮ್ಮಪ್ಪ ರಿವರಿಗೆ 1 ಎಕರೆ 15 ಗುಂಟೆ ವಿಭಾಗದಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ಮುನಿವೆಂಕಟಪ್ಪ ಮತ್ತು ಅವರ ಮಕ್ಕಳು ತಮ್ಮ ಭಾಗದ 2 ಎಕರೆ 20 ಗುಂಟೆ ಜಮೀನನ್ನು ಸುಮಾರು 30 ಜನರಿಗೆ ನಿವೇಶನ ಮಾಡಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸೀನಪ್ಪ ರವರು ತಮ್ಮ ಭಾಗದ 10 ಗುಂಟೆ ಜಮೀನನ್ನು ಬಾಲಕೃಷ್ಣ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಿಕ್ಕಪಿಳ್ಳಪ್ಪನ ಮಕ್ಕಳಾದ ಸುಬ್ರಮಣಿ ಮತ್ತು

ಚಿನ್ನಸ್ವಾಮಿ ರವರು 20 ಗುಂಟೆ ಜಾಗವನ್ನು ನಿವೇಶಗಳನ್ನಾಗಿ ಮಾಡಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದರಲ್ಲಿ 10 ಗುಂಟೆ ಉಳಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ತಿಮ್ಮಪ್ಪ ರವರ ಭಾಗದ 1 ಎಕರೆ 15 ಗುಂಟೆಯಲ್ಲಿ ಅವರ ಮಕ್ಕಳು ಲಕ್ಷಯ್ಯ ಮತ್ತು ಯಲ್ಲಪ್ಪ ರವರು ಸ್ವಾಧೀನ ಇರುತ್ತಾರೆ ಎಂದರೆ ಸಾಕ್ಷಿಯು ತಾವೂ ಸಹಾ ಸ್ವಾಧೀನ ಇರುವುದಾಗಿ ಉತ್ತರಿಸುತ್ತಾರೆ. ದಾವಾ ಐಟಂ ನಂ. 8 ರ ಸ್ವತ್ತು ಚಿಕ್ಕಮುನಿಸ್ವಾಮಿರವರಿಗೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**
**(ಕೇಶವಮೂರ್ತಿ.ಬಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ**